ಹೊಡಿಬಡಿ ಆಟ-2024

TATA IPL

ಹಾರ್ದಿಕ್ ಸಂಪೂರ್ಣವಾಗಿ ಫಿಟ್ ಆಗಿಲ್ಲ. ಅವರ ಬೌಲಿಂಗ್ ಚದುರಿಹೋಗಿದೆ. ಹಾರ್ದಿಕ್ ಪಾಂಡ್ಯ ಮತ್ತು ಅವರ ಬೌಲಿಂಗ್ ಬಗ್ಗೆ ಸಕಾರಾತ್ಮಕ ಅಂಶವೆಂದರೆ ಅವರು ಸವಾಲನ್ನು ಸ್ವೀಕರಿಸಲು ಸಿದ್ಧರಾಗಿರುವುದು. ಕ್ರೀಡಾ ಪರಿಭಾಷೆಯಲ್ಲಿ ಬಳಸುವಂತೆ, ಉತ್ತಮವಾಗಿ ಆಡುತ್ತಿಲ್ಲ. ಕೈಯಲ್ಲಿ ಚೆಂಡನ್ನು ಹಿಡಿದುಕೊಂಡರೂ ಅವರ ಫಿಟ್ನೆಸ್ ಬಗ್ಗೆ ಅನುಮಾನವೇ ಇದೆ. ಅವರು ಎಲ್ಲಿಯೂ 100% ಫಿಟ್ ಆಗಿ ಕಾಣುವುದಿಲ್ಲ. ಅವರ ಬೌಲಿಂಗ್ ಬಲವಾಗಿಲ್ಲ.

-ಎಡಂ ಗಿಲ್‌ಕ್ರಿಸ್ಟ್ ಮಾಜಿ ಕ್ರಿಕೆಟಿಗ

ಇಂದಿನ ಪಂದ್ಯ » ರಾಜಸ್ಥಾನ ರಾಯಲ್ಸ್ VS ಕೋಲ್ಕತ್ತಾ ನೈಟ್ ರೈಡರ್ಸ್

ಸಮಯ : 0030PM
ಸ್ಥಳ: ಈಡನ್ ಗಾರ್ಡನ್

ಹಾಲ್ ಆಫ್ ಫೇಮ್

ಭಾನುವಾರ ನಡೆದ ಸಿಎಸ್‌ಕೆ ವಿರುದ್ಧದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡದ ರೋಹಿತ್ ಶರ್ಮ ಹೊಸ ದಾಖಲೆ ಬರೆದರು. ಟಿ20 ಕ್ರಿಕೆಟ್‌ನಲ್ಲಿ 500 ಸಿಕ್ಸರ್‌ಗಳನ್ನು ಬಾರಿಸಿದ ಮೊದಲ ಭಾರತೀಯ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರು ಇನಿಂಗ್ಸ್‌ನಲ್ಲಿ ಐದು ಸಿಕ್ಸರ್ ಬಾರಿಸುವ ಮೂಲಕ ಈ ಗಡಿಯನ್ನು ದಾಟಿದ್ದಾರೆ. ರವೀಂದ್ರ ಜಡೇಜಾ ಅವರ ಬೌಲಿಂಗ್‌ನಲ್ಲಿ ಬಂದ ಮೂರನೇ ಸಿಕ್ಸರ್ ಗಳೊಂದಿಗೆ ರೋಹಿತ್ 500 ಟಿ 20 ಸಿಕ್ಸರ್ ಪೂರೈಸಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಪರ್ಪಲ್ ಕ್ಯಾಪ್

11 ವಿಕೆಟ್
ಯಜುವೆಂದ್ರ ಚಹಲ್

ಆರೆಂಜ್ ಕ್ಯಾಪ್

361 ರನ್
ವಿರಾಟ್ ಕೊಹ್ಲಿ

ಮತ್ತೆ ದಾಖಲೆ ಬರೆದ ಹೈದ್ರಾಬಾದ | ದಿನೇಶ್ ಕಾರ್ತಿಕ್ ಹೋರಾಟ ವ್ಯರ್ಥ

ಬೆಂಗಳೂರಿಗೆ ಹೆಡ್ ಡಿಚ್ಚಿ

ಬೆಂಗಳೂರು: ಟ್ರಾವಿಸ್ ಹೆಡ್ ಹಾಗೂ ಹೆನ್‌ರಿಚ್ ಕ್ಲಾಸೆನ್ ಅವರ ಬಿರುಸಿನ ಬ್ಯಾಟಿಂಗ್ ನೆರವಿನಿಂದ ಹೈದ್ರಾಬಾದ್ ತಂಡವೂ ಐತಿಹಾಸಿಕ ಮತ್ತು ದಾಖಲೆಗಳ ಗೆಲುವು ಸಾಧಿಸಿದೆ. ಟೂರ್ನಿಯಲ್ಲಿ ಅತಿ ಹೆಚ್ಚು ಬ್ಯಾಟಿಂಗ್ ಪ್ರಾಬಲ್ಯ ಹೊಂದಿರುವ ತಂಡವೆಂದು ಕರೆಯಲ್ಪಡುವ ಹೈದ್ರಾಬಾದ್ ತಂಡ ಮತ್ತೊಮ್ಮೆ ಮೈಲುಗಲ್ಲು ಸಾಧಿಸಿದೆ. ಮುಂಬಯಿ ವಿರುದ್ಧ 277 ರನ್ ಬಾರಿಸಿದ್ದ ಹೈದ್ರಾಬಾದ್ ತಂಡ ಇಲ್ಲಿಯ ವರೆಗಿನ ಅತಿ ಹೆಚ್ಚು ರನ್ ಬಾರಿಸಿದ್ದ ತಂಡವಾಗಿತ್ತು. ಆದರೆ ಇದೇ ಟೂರ್ನಿಯಲ್ಲಿ ಮತ್ತೊಮ್ಮೆ ತಮ್ಮ ದಾಖಲೆಯನ್ನು ತಾನೆ ಮುರಿದಿರುವ ಹೈದ್ರಾಬಾದ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿ ಬರೋಬ್ಬರಿ 3 ವಿಕೆಟ್ ಕಳೆದುಕೊಂಡು 287 ಬಾರಿಸಿತು. ಇದನ್ನು ಬೆನ್ನಟ್ಟಿದ ಆರ್‌ಸಿಬಿ ತಂಡ ದಿನೇಶ್ ಕಾರ್ತಿಕ್ ಅವರ ಬಿರುಸಿನ ಬ್ಯಾಟಿಂಗ್ ನೆರವಿನಿಂದ 7 ವಿಕೆಟ್ ಕಳೆದುಕೊಂಡು 262 ರನ್ ಗಳಿಸಿ ಹೋರಟದ ಹೊರತೂ ಸೋಲನುಭವಿಸಿತು.

ಮಹಾ ಗುರಿ ನೀಡಿದ ಹೆಡ್, ಕ್ಲಾಸೆನ್

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ ತಂಡದ ಬ್ಯಾಟಿಂಗ್ ಆರಂಭಿಸಿದ ಅಭಿಷೇಕ್ ಶರ್ಮ ಮತ್ತು ಟ್ರಾವಿಸ್ ಹೆಡ್ ಆಕ್ರಮಣಕಾರಿ ಹಾಗೂ ದೊಡ್ಡ ಆರಂಭ ನೀಡಿದರು. ಈ ಜೋಡಿ ಮೊದಲ ವಿಕೆಟ್‌ಗೆ 108 ರನ್‌ಗಳ ಜೊತೆಯಾಟ ನಿರ್ಮಿಸಿತು. ಈ ವೇಳೆ ಅಭಿಶೇಕ್ 34 ರನ್ ಗಳಿಸಿ ಔಟಾದರು. ಬಳಿಕ ಜೊತೆಗೂಡಿದ ಟ್ರಾವಿಸ್ ಹೆಡ್ ಮತ್ತು ಹೆನ್ರಿಚ್ ಕ್ಲಾಸೆನ್ ಸ್ಫೋಟಕ ಆಟಕ್ಕೆ ಮುಂದಾದರು. ಆರಂಭಿಕ ಬ್ಯಾಟರ್ ಟ್ರಾವಿಸ್ ಹೆಡ್ ಕೇವಲ 39 ಎಸೆತಗಳಲ್ಲಿ ಐಪಿಎಲ್‌ನಲ್ಲಿ ತಮ್ಮ ಚೊಚ್ಚಲ ಶತಕವನ್ನು ಬಾರಿಸಿದರು. ಈ ಮೂಲಕ ಐಪಿಎಲ್ ಇತಿಹಾಸದಲ್ಲಿ ಕ್ರಿಸ್ ಗೇಲ್, ಯೂಸುಫ್ ಪಠಾಣ್ ಮತ್ತು ಡೇವಿಡ್ ಮಿಲ್ಲರ್ ನಂತರ ನಾಲ್ಕನೇ ವೇಗದ ಶತಕ ಗಳಿಸಿದರು. ಅಂತಿಮವಾಗಿ ಟ್ರಾವಿಸ್ ಹೆಡ್ ಕೇವಲ 41 ಎಸೆತಗಳಲ್ಲಿ 102 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಇನ್ನು ಹೆನ್ರಿಚ್ ಕ್ಲಾಸೆನ್ 67 ರನ್ ಗಳಿಸಿ, ಕೂಡ ಆರ್‌ಸಿಬಿ ಬೌಲರ್‌ಗಳನ್ನು ಬೆವರಿಳಿಸಿದರು. ಕೊನೆಯಲ್ಲಿ ಏಡೆನ್ ಮಾರ್ಕ್ರಾಮ್ ಅಜೇಯ 32 ರನ್ ಗಳಿಸಿದರೆ, ಅಬ್ದುಲ್ ಸಮದ್ 10 ಎಸೆತಗಳಲ್ಲಿ 4 ಬೌಂಡರಿ ಹಾಗೂ 3 ಸಿಕ್ಸರ್‌ಗಳ ಸಮೇತ ಅಜೇಯ 37 ರನ್ ಬಾರಿಸಿದರು.

ಸ್ಕೋರ್: ಹೈದ್ರಾಬಾದ: 287/3 ಹೆಡ್ 102, ಕ್ಲಾಸೆನ್ 67, ಫರ್ಗೂಸನ್ 51/2
ಬೆಂಗಳೂರು: 262/7 ದಿನೇಶ್ ಕಾರ್ತಿಕ್ 83, ಪ್ಲೆಸಿಸ್ 62, ಕಮ್ಮಿನ್ಸ್ 43/3

ಮಿಂಚಿದ ಪ್ಲೆಸಿಸ್, ಕಾರ್ತಿಕ್

ಮಹಾ ಗುರಿ ಬೆನ್ನಟ್ಟಿದ ಆರ್‌ಸಿಬಿ ತಂಡ ಆರ್‌ಸಿಬಿ ತಂಡದ ಬ್ಯಾಟಿಂಗ್ ಆರಂಭಿಸಿದ ನಾಯಕ ಫಾಫ್ ಡು ಪ್ಲೆಸಿಸ್ ಮತ್ತು ವಿರಾಟ್ ಕೊಹ್ಲಿ ಆಕ್ರಮಣಕಾರಿ ಬ್ಯಾಟಿಂಗ್ ಆರಂಭ ನೀಡಿದರು. ಈ ಜೋಡಿ ಮೊದಲ ವಿಕೆಟ್‌ಗೆ 80 ರನ್‌ಗಳ ಜೊತೆಯಾಟ ನಿರ್ಮಿಸಿದರು. ಈ ವೇಳೆ ವಿರಾಟ್ ಕೊಹ್ಲಿ 42 ರನ್ ಗಳಿಸಿ ಔಟಾದರು. ನಂತರ ಬಂದ ವಿಲ್ ಜ್ಯಾಕ್ಸ್ ರನೌಟ್ ಆದರು. ರಜತ್ ಪಾಟಿದಾರ್ 9 ರನ್ ಗಳಿಸಿದರೆ, ಸೌರವ್ ಚೌಹಾಣ್ ಸೊನ್ನೆ ಸುತ್ತಿದರು. ನಾಯಕ ಫಾಫ್ ಡು ಪ್ಲೆಸಿಸ್ 28 ಎಸೆತಗಳಲ್ಲಿ 62 ರನ್ ಬಾರಿಸಿ ಔಟಾದರೆ, ದಿನೇಶ್ ಕಾರ್ತಿಕ್ ಸಿಡಿಲಬ್ಬರ ಬ್ಯಾಟಿಂಗ್ ಮಾಡಿ ಆರ್‌ಸಿಬಿ ತಂಡದ ಹೋರಾಟಕ್ಕೆ ಮರುಜೀವ ತುಂಬಿದರು. ದಿನೇಶ್ ಕಾರ್ತಿಕ್ ಕೇವಲ 35 ಎಸೆತಗಳಲ್ಲಿ 5 ಬೌಂಡರಿ ಹಾಗೂ 7 ಸಿಕ್ಸರ್‌ಗಳ ನೆರವಿನಿಂದ 83 ರನ್ ಬಾರಿಸಿದರು. ಮಹಿಪಾಲ್ 19 ರನ್ ಗಳಿಸಿದರೆ, ಅನುಜ್ ರಾವತ್ 14 ಅಜೇಯ 25 ರನ್ ಗಳಿಸಿದರು.

ದಾಖಲೆಗಳ ಪಟ್ಟಿ

549: ಐಪಿಎಲ್‌ನ ಪಂದ್ಯವೊಂದರಲ್ಲಿ ಎರಡೂ ಇನ್ನಿಂಗ್ಸ್ ಕೂಡಿ ಬಾರಿಸಿದ ಗರಿಷ್ಠ ಸ್ಕೋರ್‌ಗೆ ಪಂದ್ಯ ಸಾಕ್ಷಿಯಾಯಿತು.

287: ಐಪಿಎಲ್‌ನಲ್ಲಿ ಇನ್ನಿಂಗ್ಸ್ ಒಂದರ ಅತಿ ಹೆಚ್ಚು ರನ್

2: ಹೈದರಾಬಾದ್ ತಂಡದ 287 ರನ್‌ಗಳು ಟಿ20 ಕ್ರಿಕೆಟ್ ಇತಿಹಾಸದಲ್ಲಿ 2ನೇ ಅತಿ ಹೆಚ್ಚು ತಂಡದ ಮೊತ್ತವಾಗಿದೆ.

1: ಹೈದರಾಬಾದ್ ತಂಡದ 287 ರನ್ನಗಳು ಫ್ರಾಂಚೈಸಿ ಕ್ರಿಕೆಟ್‌ನಲ್ಲಿ ಇದುವರೆಗಿನ ಅತ್ಯಧಿಕ ತಂಡದ ಮೊತ್ತವಾಗಿದೆ.

22: ಹೈದರಾಬಾದ್‌ನಿಂದ ಬೆಂಗಳೂರಿ ನಲ್ಲಿ 22 ಸಿಕ್ಸರ್ ಐಪಿಎಲ್ ಇತಿಹಾಸದಲ್ಲಿ ಒಂದೇ ಇನ್ನಿಂಗ್ಸ್ ನಲ್ಲಿ ಅತಿ ಹೆಚ್ಚು ಸಿಕ್ಸರ್.

287: ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ 287 ರನ್ ತಂಡದ ಗರಿಷ್ಠ ಮೊತ್ತ.

39: ಟ್ರಾವಿಸ್ ಹೆಡ್ 39 ಎಸೆತಗಳಲ್ಲಿ ತಮ್ಮ ಚೊಚ್ಚಲ ಐಪಿಎಲ್ ಶತಕ ಸಿಡಿಸಿದರು. ಇದು ಹೈದರಾಬಾದ್ ಬ್ಯಾಟರ್‌ನ ವೇಗವಾದ ಮತ್ತು ಐಪಿಎಲ್ ಇತಿಹಾಸದಲ್ಲಿ ನಾಲ್ಕನೇ ವೇಗದ ಶತಕವಾಗಿದೆ.

4: ಐಪಿಎಲ್ ಇನ್ನಿಂಗ್ಸ್‌ನಲ್ಲಿ 4 ಅಥವಾ ಅದಕ್ಕಿಂತ ಹೆಚ್ಚು ಬೌಲರ್‌ಗಳು 50ಕ್ಕಿಂತ ಹೆಚ್ಚು ರನ್‌ಗಳನ್ನು ಬಿಟ್ಟುಕೊಟ್ಟ ಮೊದಲ ನಿದರ್ಶನ.

ರಾಜಸ್ಥಾನ ರಾಯಲ್ಸ್‌ಗೆ ಕೋಲ್ಕತ್ತಾ ರೈಡರ್ಸ್ ಸವಾಲು

ಈಡನ್ ಗಾರ್ಡನ್‌ನಲ್ಲಿ ಅಗ್ರರ ಹಣಾಹಣಿ

ಕೋಲ್ಕತ್ತಾ: ಟೂರ್ನಿಯಲ್ಲಿ ಪ್ಲೇಆಫ್ ಪ್ರವೇಶಕ್ಕೆ ತೀವ್ರ ಪೈಪೋಟಿ ನಡೆಯುತ್ತಿದ್ದು, ಈ ಮಧ್ಯೆ ಅಗ್ರ ತಂಡಗಳಾದ ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ರಾಜಸ್ಥಾನ ರಾಯಲ್ಸ್ ತಂಡಗಳು ಮಂಗಳವಾರದ ಪಂದ್ಯದಲ್ಲಿ ಮುಖಾಮುಖಿಯಾಗಿಲಿವೆ. ಐಪಿಎಲ್ ಪ್ರಾರಂಭವಾಗಿ ಮೊದಲ ಹಂತ ಮುಗಿದಿದ್ದು, ಎಲ್ಲಾ ತಂಡಗಳು ಪ್ಲೇಆಫ್ ಚಿಂತೆಯಲ್ಲಿವೆ. ಈ ಮಧ್ಯೆಯೇ ಅಗ್ರ ಸ್ಥಾನಕ್ಕೆ ನಿಂತರ ಪೈಪೋಟಿ ನಡೆಸಿರುವ ಸ್ಯಾಮ್ಸನ್ ಪಡೆ ಅಂಕಪಟ್ಟಿಯಲ್ಲಿ ಮೊದಲ ಸ್ಥಾನ ಕಾಯ್ದುಕೊಂಡಿದೆ. ಇನ್ನೊಂದೆಡೆ ಟೂರ್ನಿ ಆರಂಭದಿಂದಲೂ ಅಗ್ರ ಸ್ಥಾನದ ಮೇಲೆ ಕಣ್ಣು ಇಟ್ಟಿರುವ ಕೆಕೆಆರ್ ತಂಡ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಉಭಯ ತಂಡಗಳು ಸಮಬಲ ಸಾಮರ್ಥ್ಯ ಹೊಂದಿದ್ದು, ಪಂದ್ಯ ರೋಚಕತೆ ಹುಟ್ಟುಹಾಕಿದೆ.

ಕೆಕೆಆರ್ ಎಲ್ಲದರಲ್ಲೂ ಫಿಟ್

ಕೆಕೆಆರ್ ತಂಡ ಈ ಬಾರಿಯ ಐಪಿಎಲ್‌ನಲ್ಲಿ ಹೊಸ ಅಧ್ಯಾಯ ಬರೆಯುತ್ತಿದೆ. ತಂಡದಲ್ಲಿ ಗೌತಮ್ ಗಂಭೀರ್ ಬಂದಮೇಲೆ ಹೊಸ ಜೋಷ್‌ನೊಂದಿಗೆ ಆಡುತ್ತಿರುವ ತಂಡ ಪ್ಲೇಆಫ್ ವಿಚಾರದಲ್ಲಿ ಸೇಫ್ ಇದೆ. ಆದರೂ ಅಗ್ರ ಎರಡರಲ್ಲಿ ಉಳಿದುಕೊಳ್ಳಲು ಪೈಪೋಟಿ ನಡಿಸಬೇಕಿದೆ. ಮೂರನೇ ಸ್ಥಾನದಲ್ಲಿ ಇರುವ ಎಸ್‌ಆರ್‌ಎಚ್ ಹಾಗೂ ಸಿಎಸ್‌ಕೆ ತಂಡಗಳಿಂದ ಅಗ್ರ ಸ್ಥಾನ ಉಳಿಸಿಕೊಳ್ಳುವುದು ತಂಡಕ್ಕೆ ಸವಾಲಾಗಿದೆ. ಪ್ರಾರಂಭದ ಹಂತದಲ್ಲಿ ಕೆಕೆಆರ್ ತಂಡ ಗೆಲುವಿನ ಓಟವನ್ನೇ ಓಡುತ್ತಿದೆ. ಸುನಿಲ್ ನಾರೈನ್, ಸಾಲ್ಟ್, ನಾಯಕ ಅಯ್ಯರ್ ಉತ್ತಮ ಆರಂಭ ನೀಡುತ್ತಿದ್ದು, ಮಧ್ಯಮ ಕ್ರಮಾಂಕದಲ್ಲಿ ವೆಂಕಟೇಶ್, ರಸೇಲ್ ರಣದೀಪ್, ರಿಂಕು ಭಾರಿ ಲಯದಲ್ಲಿದ್ದು, ತಂಡದ ಮೊತ್ತ ಏರಿಸುತ್ತಾರೆ. ಇನ್ನು ಬೌಲಿಂಗ್ ವಿಭಾಗದಲ್ಲಿ ವೈಭವ್ ಆರೋರಾ, ಹರ್ಷಿತ್ ರಾಣ, ಸುನಿಲ್ ನಾರೈನ್ ಸೇರಿದಂತೆ ಸ್ಟಾರ್ಟ್ ಲಯಕ್ಕೆ ಮರಳಿದ್ದು ಬ್ಯಾಟರ್‌ಗಳನ್ನು ಕಟ್ಟಿ ಹಾಕಲಿದ್ದಾರೆ.

ಆತ್ಮವಿಶ್ವಾಸದಲ್ಲಿ ರಾಜಸ್ಥಾನ

ಅಗ್ರ ಸ್ಥಾನದಲ್ಲಿ ಇರುವ ರಾಜಸ್ಥಾನ ತಂಡಕ್ಕೆ ಆತ್ಮವಿಶ್ವಾಸವಿದೆ. ಟೂರ್ನಿಯಲ್ಲಿ ಅತಿ ಯಶಸ್ವಿಯಾಗಿ ಆರಂಭ ಕಂಡಿರುವ ರಾಜಸ್ಥಾನ ತಂಡಕ್ಕೆ ಪ್ಲೇಆಫ್ ಟಿಕೆಟ್ ಸುಲಭವಾಗಿದೆ. ಟೂರ್ನಿಯಲ್ಲಿ ಒಮದು ಪಂದ್ಯ ಬಟ್ಟರೇ ಎಲ್ಲವೂ ಗೆದ್ದಿರುವುದು. ತಂಡಕ್ಕೆ ಆತ್ಮವಿಶ್ವಾಸ ತಂದಿದೆ. ಬ್ಯಾಟಿಂಗ್‌ನಲ್ಲಿ ಪಾರಮ್ಯ ಹೊಂದಿರುವ ತಂಡ ಅದ್ಭುತ ಆರಂಭಿಕರನ್ನು ಹೊಂದಿದೆ. ಜೈಸ್ವಾಲ್ ಮತ್ತೆ ಲಯಕ್ಕೆ ಮರಳಿದ್ದು ತಂಡಕ್ಕೆ ಆನೆ ಬಲ ಬಂದಂತಾಗಿದೆ. ಅವರೊಂದಿಗೆ ಬಟ್ಲರ್ ಉತ್ತಮ ಆರಂಭ ನೀಡಿದರೆ ಪಂದ್ಯದಲ್ಲಿ ಹಿಡಿತ ಸಾಧಿಸಬಹುದು, ಅವರಂತೆ ಸಂಜು ಸ್ಯಾಮ್ಸನ್ ಹಾಗೂ ರಿಯಾನ್ ಪರಾಗ್ ಭಾರಿ ಲಯದಲ್ಲಿ ಇದ್ದು, ತಂಡದ ಆತ್ಮವಿಶ್ವಾಸ ಇನ್ನೂ ಹೆಚ್ಚಿಸಿದೆ. ಫಿನಿಶಿಂಗ್‌ನಲ್ಲಿ ಹ್ಯಾಟ್‌ಮೇರ್ ಪಾರಮ್ಯ ವಹಿಸುತ್ತಿದ್ದು, ತಂಡದ ಚಿಂತೆ ದೂರು ಮಾಡಿದೆ. ಇನ್ನು ಬೌಲಿಂಗ್‌ನಲ್ಲಿ ಬೋಲ್ಟ್, ಸಂದೀಪ್, ಆವೇಶ್ ಉತ್ತಮ ಲಯದಲ್ಲಿದ್ದು, ಸ್ಪಿನ್‌ನಲ್ಲಿ ಅಶ್ವಿನ್, ಪರಾಗ್ ಕಾರ್ಯ ನಿರ್ವಹಿಸಲಿದ್ದಾರೆ.

ಪಿಚ್ ರಿಪೋರ್ಟ್

ಪಂದ್ಯವೂ ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ಇದ್ದು, ರನ್ ಹೊಳೆ ಹರಿಯುವ ಸಾಧ್ಯತೆ ಇದೆ. ಪಿಚ್‌ನಲ್ಲಿ ಬೌನ್ಸ್ ಇರಲಿದೆ. ಅದರಂತೆ ಬೌಲರ್‌ಗೆ ಸವಾಲಾಗಲಿದೆ. ಚೆಸಿಂಗ್ ಪಿಚ್ ಇರುವುದರಿಂದ ಮೊದಲು ಬೌಲಿಂಗ್ ಮಾಡುವುದು ಉತ್ತಮ.

ಟೆನ್ನಿಸ್: 80ನೇ ಸ್ಥಾನಕ್ಕೇರಿದ ನಗಾಲ್

ಎಟಿಪಿ ರ್‍ಯಾಂಕಿಗ್ ಬಿಡುಗಡೆ | ಶ್ರೇಷ್ಠ ಸಾಧನೆ ಮಾಡಿದ ಭಾರತೀಯ

ದೆಹಲಿ: ಎಟಿಪಿ ರ್‍ಯಾಂಕಿಗ್ ಪಟ್ಟಿ ಬಿಡುಗಡೆಯಾಗಿದ್ದು, ಭಾರತದ ಸುಮಿತ್ ನಾಗಲ್ ಜೀವಮಾನದ ಸಾಧನೆ ಮಾಡಿದ್ದಾರೆ ಪ್ರಸ್ತುತ ನಡೆಯುತ್ತಿರುವ ಮೋಂಟೆ ಕಾರ್ಲೊ ಮಾಸ್ಟರ್ಸ್ ಟೂರ್ನಿಯಲ್ಲಿ ಮಿಂಚುತ್ತಿರುವ ಅವರು, ಸೋಮವಾರ ಬಿಡುಗಡೆಯಾಗಿರುವ ರ್‍ಯಾಂಕಿಂಗ್‌ನಲ್ಲಿ 80ನೇ ಸ್ಥಾನ ತಲುಪಿ ಜೀವನಶ್ರೇಷ್ಠ ಸಾಧನೆ ಮಾಡಿದ್ದಾರೆ. ಈ ಹಿಂದೆ ನಾಗಲ್ ಇಟಲಿಯ ಫ್ಲಾವಿಯೊ ಕೊಬೊಲಿ ಹಾಗೂ ಅರ್ಜೆಂಟೀನದ ಫಾಕುಂಡೊ ಡಿಯಾಝ್ರುನ್ನು ಮಣಿಸಿ ಪ್ರಧಾನ ಸುತ್ತಿಗೆ ತೇರ್ಗಡೆಯಾಗಿದ್ದರು. ಆವೆಮಣ್ಣಿನಲ್ಲಿ ನಡೆದ ಮಾಸ್ಟರ್ಸ್ ಟೆನಿಸ್ ಟೂರ್ನಿಯಲ್ಲಿ ವಿಜಯ್ ಅಮೃತ್ರಾಜ್(1977) ಹಾಗೂ ರಮೇಶ್ ಕೃಷ್ಣನ್ (1982) ನಂತರ ಪ್ರಧಾನ ಸುತ್ತಿಗೇರಿದ ಭಾರತದ ಮೂರನೇ ಆಟಗಾರನಾಗಿದ್ದಾರೆ.

ಆವೆಮಣ್ಣಿನ ಅಂಗಣದಲ್ಲಿ ಎಟಿಪಿ ಮಾಸ್ಟರ್ಸ್-1000 ಟೂರ್ನಿಯ ಮೊದಲ ಸುತ್ತಿನಲ್ಲಿ ಇಟಲಿಯ ವಿಶ್ವದ ನಂ.38ನೇ ಆಟಗಾರ ಮ್ಯಾಟೆಯೊ ಅರ್ನಾಲ್ಡಿ ಅವರನ್ನು ಮಣಿಸಿದ ಭಾರತದ ಮೊದಲ ಆಟಗಾರ ಎನಿಸಿಕೊಳ್ಳುವ ಮೂಲಕ ನಾಗಲ್ ನಿರ್ಮಿಸಿದ್ದರು. ಆದರೆ ಅವರು ಎರಡನೇ ಸುತ್ತಿನಲ್ಲಿ ಕಳೆದ ವರ್ಷದ ರನ್ನರ್ಸ್ ಅಪ್ ಹೊಲ್ಗರ್ ರೂನ್ ಅವರನ್ನು ಮೂರು ಸೆಟ್‌ಗಳ ಅಂತರ ದಿಂದ ಸೋಲಿಸಿದ್ದರು. ಈ ಹಿನ್ನೆಲೆಯಲ್ಲಿ ಅವರು ಎಟಿಪಿ ರ್‍ಯಾಂಕಿಂಗ್‌ನಲ್ಲಿ 13 ಸ್ಥಾನ ಮೇಲಕ್ಕೇರಿದ್ದಾರೆ.

ಪಾಂಡಿಚೇರಿಯಲ್ಲಿ ನಡೆದ 38ನೇ ಯೂತ್ ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ರನ್ನರ್ಸ್ ಅಪ್ ಸ್ಥಾನ ಪಡೆದುಕೊಂಡಿತು. ಸೋಮವಾರ ನಡೆದ ಫೈನಲ್ ಹಣಾಹಣಿಯಲ್ಲಿ ಕರ್ನಾಟಕ ತಂಡವು 60-65ರಿಂದ ತಮಿಳುನಾಡು ತಂಡಕ್ಕೆ ಮಣಿಯಿತು. ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡವು 59-50ರಿಂದ ಕೇರಳ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತಿಗೆ ತಲುಪಿತ್ತು.

ಕುಸ್ತಿ: ಅಂಜು, ಹರ್ಷಿತಾಗೆ ಬೆಳ್ಳಿ

ಬಿಷ್ಕೆಕ್: ಸೀನಿಯರ್ ಏಷ್ಯನ್ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಅಂಜು ಮತ್ತು ಹರ್ಷಿತಾ ಬೆಳ್ಳಿಪದಕ ಗೆದ್ದರು. ರೈಲ್ವೇಸ್‌ನ ಕುಸ್ತಿಪಟು ಅಂಜು ಭಾನುವಾರ ನಡೆದ 53 ಕೆ.ಜಿ ವಿಭಾಗದ ಫೈನಲ್‌ನಲ್ಲಿ ಉತ್ತರ ಕೊರಿಯಾದ ಜಿ ಹಯಾಂಗ್ ಕಿಮ್ ಅವರೊಂದಿಗೆ ಸೋತರು. ಒಂದೇ ಒಂದು ಅಂಕ ಗಳಿಸಲು ಅಂಜು ಅವರಿಗೆ ಸಾಧ್ಯವಾಗದೆ, ತಾಂತ್ರಿಕ ಕೌಶಲದ ಆಧಾರದಲ್ಲಿ ಚಿನ್ನವನ್ನು ಕಳೆದುಕೊಂಡರು. ಸೆಮಿಫೈನಲ್‌ನಲ್ಲಿ 9-6 ರಿಂದ ಚೀನಾದ ಚುನ್ ಲೀ ಅವರನ್ನು ಹಿಮ್ಮೆಟ್ಟಿಸಿದ್ದರು. 72 ಕೆಜಿ ವಿಭಾಗದ ಫೈನಲ್‌ನಲ್ಲಿ ಹರ್ಷಿತಾ 2-5ರಿಂದ ಚೀನಾದ ಕಿಯಾನ್ ಜಿಯಾಂಗ್ ವಿರುದ್ಧ ಪರಾಭವಗೊಂಡರು. ಅವರು ಸೆಮಿಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಓಜೋಡಾ ಜರಿಪ್ರೋವಾ ಅವರನ್ನು ಸೋಲಿಸಿದ್ದರು. ಮನೀಶಾ ಭನ್ವಾಲಾ (62 ಕೆಜಿ) ಮತ್ತು ಅಂತಿಮ್ ಕುಂದು (65 ಕೆಜಿ) ಕಂಚಿನ ಪದಕ ಗೆದ್ದರು.

ಭಾರತಕ್ಕೆ ಆರು ಪದಕ: ಭಾರತದ ಮಹಿಳಾ ಕುಸ್ತಿಪಟುಗಳು 3 ಬೆಳ್ಳಿ ಮತ್ತು 3 ಕಂಚಿನ ಪದಕ ಗೆದ್ದಿದ್ದಾರೆ. ರಾಧಿಕಾ 68 ಕೆಜಿ ವಿಭಾಗದಲ್ಲಿ ಬೆಳ್ಳಿ, ಶಿವಾನಿ ಪವಾರ್ ಶನಿವಾರ ಕಂಚಿನ ಪದಕ ಜಯಿಸಿದ್ದರು. ಪುರುಷರ ಫ್ರೀಸ್ಟೈಲ್ ಕುಸ್ತಿಯಲ್ಲಿ ಉದಿತ್ (57 ಕೆಜಿ) ಬೆಳ್ಳಿ ಗೆದ್ದರೆ, ಅಭಿಮನ್ಯು (70 ಕೆಜಿ) ಮತ್ತು ವಿಕ್ಕಿ (97 ಕೆಜಿ) ಕಂಚಿನ ಪದಕ ಗೆದ್ದರು.

200 ಕೋಟಿ ರು. ಸಂಪತ್ತು ದಾನ ಮಾಡಿ ಸನ್ಯಾಸತ್ವ ಸ್ವೀಕಾರ

ಗುಜರಾತ್‌ನ ವಿಶಿಷ್ಟ ಉದ್ಯಮಿ ದಂಪತಿ!

ಅಹಮದಾಬಾದ್: ಗುಜರಾತ್‌ನ ಸಬರಕಾಂತ ಜಿಲ್ಲೆಯ ಹಿಮ್ಮತ್ ನಗರದ ನಿವಾಸಿ ಭವೇಶ್ಭಾಯ್ ಭಂಡಾರಿ ಮತ್ತು ಪತ್ನಿ ಜಿನಾಲ್ ಭಂಡಾರಿ ₹200 ಕೋಟಿ ಮೌಲ್ಯದ ಸಂಪತ್ತನೆಲ್ಲಾ ಉದಾರವಾಗಿ ದಾನ ಮಾಡಿ ಜೈನ ಧರ್ಮದ ರೂ